<u>ಸಾಕ್ಷಿಯನ್ನು ದಿನಾಂಕಃ16.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ 3 ರಿಂದ 5 ನೇ ವಾದಿಯರ ಪರ ಶ್ರೀ ಡಿ ಕೆ ಪಿ ವಕೀಲರಿಂದಃ</u>

1. ನಾನು 8 ನೇ ತರಗತಿ ವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. 2 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ ಆಗಿದ್ದು, 3 ನೇ ಪ್ರತಿವಾದಿ ನನ್ನ ತಮ್ಮ. ನನಗೆ 1 ರಿಂದ 5 ನೇ ವಾದಿಯರು ಗೊತ್ತು. ಅವರು ಈ ದಾವೆ ದಾಖಲಿಸಿದಾಗ ನಿಡಘಟ್ಟದಲ್ಲಿ ವಾಸವಾಗಿದ್ದರು ಎಂದರೆ ಸರಿ. ನಿಡಘಟ್ಟ ಗ್ರಾಮದ ಸರ್ವೆ ನಂಬರ್ 17 ರ ಜಮೀನು ನನಗೆ ಸರಿಯಾಗಿ ಗೊತ್ತಿಲ್ಲ. ಅದರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಆರ್ ಟಿ ಸಿ ದಾಖಲೆ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಪೂರ್ವಕ್ಕೆ – ಮಶೀದಿ ಜಾಗ, ಪಶ್ಚಿಮಕ್ಕೆ – ನಿಡಘಟ್ಟ ಗ್ರಾಮ ಠಾಣಾ, ಉತ್ತರಕ್ಕೆ – ಗ್ರಾಮದ ರಸ್ತೆ ಮತ್ತು ದಕ್ಷಿಣಕ್ಕೆ – ಎಂ ಸಿ

ರಸ್ತೆ ಇದರ ಮಧ್ಯೆ ಇರುವ ಜಾಗ ನಾನು ನೋಡಿದ್ದೇನೆ. ಸಾಕ್ಷಿ ಮುಂದುವರಿದು ಅದು ತನಗೆ ಸೇರಿದ್ದು ಎಂದು ನುಡಿದಿರುತ್ತಾರೆ. ಸದರಿ ಚಕ್ಕುಬಂದಿಯ ಒಳಗೆ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ತನಗೆ ಸೇರಿದ 142 ಅಡಿ ಉದ್ದ ಹಾಗೂ 50 ಅಡಿ ಅಗಲ ಜಾಗ ಇದೆ ಎಂದು ನುಡಿದಿರುತ್ತಾರೆ. ಸದರಿ ಚಕ್ಕುಬಂದಿಯ ಒಳಗೆ ಸರ್ವೆ ನಂಬರ್ 17 ರ 3 ಎಕರೆ 38 ಗುಂಟೆ ಆಸ್ತಿ ಇದೆ ಎಂದರೆ ಸರಿಯಲ್ಲ. ಚಕ್ಕುಬಂದಿಯೊಳಗೆ ಧರ್ಮದ ತೋಪು, ಸಂತೆ ಮೈದಾನ, ಹಾಲಿನ ಡೈರಿ, ಗ್ರಾಮ ಪಂಚಾಯಿತಿ ಕಛೇರಿ ಇದೆ ಎಂದರೆ ಸರಿ.

2. ನನ್ನ ತಂದೆಗೆ ಸರ್ವೆ ನಂಬರ್ ಮತ್ತು ಪಂಚಾಯಿತಿಯಲ್ಲಿ ಎರಡೂ ಕಡೆ ಆಸ್ತಿ ಇತ್ತು. ಆ ಬಗ್ಗೆ ದಾಖಲೆಯನ್ನು ನಾನು ಹಾಜರು ಪಡಿಸಿದ್ದೇನೆ. ಪಂಚಾಯಿತಿ ಖಾತೆ ನಂಬರ್ 431 ರಲ್ಲಿ ನನ್ನ ತಂದೆಗೆ ಆಸ್ತಿ ಇತ್ತು. ಪಂಚಾಯಿತಿ ಖಾತೆ ನಂಬರ್ 433 ರಲ್ಲಿ ನನ್ನ ತಂದೆಗೆ ಆಸ್ತಿ ಇತ್ತು. ಅವೆರಡೂ ಖಾತೆಗಳಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಇತ್ತು ಎಂದು ವಿಸ್ತೀರ್ಣ ಹೇಳಲು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಯಾವ ಸರ್ವೆ ನಂಬರ್ ನಲ್ಲಿ ಆಸ್ತಿ ಇತ್ತು ಎಂದು ನಾನು ತಿಳಿದುಕೊಂಡಿಲ್ಲ. ಖಾತೆ ನಂಬರ್ 433 ರಲ್ಲಿ ನನ್ನ ತಂದೆಗೆ ಪೂರ್ವ ಪಶ್ಚಿಮವಾಗಿ 120 ಅಡಿ ಉತ್ತರ ದಕ್ಷಿಣವಾಗಿ 32 ಅಡಿ ಆಸ್ತಿ ಇತ್ತು ಎಂದರೆ ಸರಿ. ಆ ಆಸ್ತಿಯನ್ನು ನಾನು, ನದೀಮ್ ಪಾಷಾ ಮತ್ತು ಮಹಮದ್ ಜಲೀಲ್ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ರೀತಿ ಖಾತೆ ಬದಲಾವಣೆ ಮಾಡಿಕೊಳ್ಳುವ ಸಮಯದಲ್ಲಿ 120 ಅಡಿ

ಇರುವ ಆಸ್ತಿಯನ್ನು 142 ಅಡಿ ಎಂದು ಹೆಚ್ಚುವರಿಯಾಗಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು 22 ಅಡಿ ಹೆಚ್ಚುವರಿಯಾಗಿ ಖಾತೆ ಮಾಡಿಸಿಕೊಂಡಿರುವ ಜಾಗ ಪಂಚಾಯಿತಿಗೆ ಸೇರಿದ ಗ್ರಾಮ ಠಾಣಾ ಆಸ್ತಿ ಎಂದರೆ ಸರಿಯಲ್ಲ. ನಾವು ಆ ರೀತಿ ಹೆಚ್ಚುವರಿಯಾಗಿ ಖಾತೆ ಮಾಡಿಸಿಕೊಂಡು ಅದರಲ್ಲಿ ಕಟ್ಟಡ ಕಟ್ಟಲು ಹೋದಾಗ ವಾದಿಯರು ಈ ದಾವೆಯನ್ನು ಸಾರ್ವಜನಿಕರ ಪರವಾಗಿ ಸಲ್ಲಿಸಿದ್ದಾರೆ ಎಂದರೆ, ನಾವು ಎಲ್ಲಾ ದಾಖಲೆಗಳನ್ನು ಪಡೆದು ಕಟ್ಟಡ ಕಟ್ಟುತ್ತಿದ್ದೆವು. ನಾವು ಹೆಚ್ಚುವರಿಯಾಗಿ ಅಕ್ರಮವಾಗಿ 22 ಅಡಿ ಖಾತೆ ಮಾಡಿಸಿಕೊಂಡಿರುವ ಜಾಗ ಸರ್ವೆ ನಂಬರ್ 17 ರ ಗ್ರಾಮ ಠಾಣಾ ಆಸ್ತಿ ಎಂದರೆ ಸರಿಯಲ್ಲ. ಆ ಅಕ್ರಮ ಖಾತೆಯನ್ನು 6 ನೇ ವಾದಿ ತಾಲ್ಲೂಕು ಪಂಚಾಯಿತಿಯಲ್ಲಿ ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಆ ಕೇಸ್ ನಲ್ಲಿ ಉಳಿದ ವಾದಿಯರು ತಾವೂ ಸಹ ಸಾರ್ವಜನಿಕರಾಗಿದ್ದು, ತಮಗೂ ಹಿತಾಸಕ್ತಿ ಇದೆ ಎಂದು ಅರ್ಜಿ ಹಾಕಿ ಸೇರಿಕೊಂಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರಿದು 6 ನೇ ವಾದಿ ಉಳಿದ ವಾದಿಯರನ್ನು ಎತ್ತಿ ಕಟ್ಟಿ ಆ ಕೇಸ್ ನಲ್ಲಿ ಅರ್ಜಿ ಹಾಕಿ ಸೇರಿಸಿದ್ದರು ಎಂದು ನುಡಿದಿರುತ್ತಾರೆ. ಆ ಪ್ರಕರಣದಲ್ಲಿ ತಾಲ್ಲೂಕು ಪಂಚಾಯಿತಿಯವರು ನಾವು ಅಕ್ರಮವಾಗಿ ಮಾಡಿಸಿಕೊಂಡಿದ್ದ ಖಾತೆಯನ್ನು ರದ್ದು ಪಡಿಸಬೇಕೆಂದು ಗ್ರಾಮ ಪಂಚಾಯಿತಿಗೆ ನಿರ್ದೇಶನ ನೀಡಿದ್ದರು ಎಂದರೆ ಆ ರೀತಿ ತಪ್ಪು ಆದೇಶ ಮಾಡಿದ್ದರು. ಗ್ರಾಮ ಪಂಚಾಯಿತಿಯವರು ಆ ರೀತಿ ಕ್ರಮ ತೆಗೆದುಕೊಳ್ಳದ ಕಾರಣ , ವಾದಿಯರು ಲೋಕಾಯುಕ್ತಕ್ಕೆ ಅರ್ಜಿ ಬರೆದು ಅದಾದ ನಂತರ ಗ್ರಾಮ

ಪಂಚಾಯಿತಿಯವರು ನಾನು ಅಕ್ರಮವಾಗಿ ಕಟ್ಟಡ ಕಟ್ಟಿದ್ದನ್ನು ತೆರವುಗೊಳಿಸಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.